# ಕಾರ್ಯನಿರ್ವಹಣಾ ಸಾರಾಂಶ

## ಸಿಎಜಿ ರವರು ಈ ಲೆಕ್ಕಪರಿಶೋಧನೆಯನ್ನು ಏಕೆ ಮಾಡಿದರು

ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿರುವ ಕಲ್ಯಾಣ ಕರ್ನಾಟಕ ಪ್ರದೇಶವು ಕರ್ನಾಟಕ ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ತುಲನಾತ್ಮಕವಾಗಿ ಕಡಿಮೆ ಅಭಿವೃದ್ಧಿ ಹೊಂದಿರುವ ಪ್ರದೇಶವಾಗಿತ್ತು. 98ನೇ ಸಂವಿಧಾನ ತಿದ್ದುಪಡಿಯ ಮೂಲಕ ಈ ಪ್ರದೇಶಕ್ಕೆ ಭಾರತದ ಸಂವಿಧಾನದ 371–ಜೆ ವಿಧಿಯಡಿಯಲ್ಲಿ ವಿಶೇಷ ಸ್ಥಾನಮಾನವನ್ನು ನೀಡಲಾಯಿತು. ಅಭಿವೃದ್ಧಿಯಲ್ಲಿನ ಅಸಮತೋಲನವನ್ನು ನಿವಾರಿಸಲು ರಾಜ್ಯಪಾಲರು ಮಂಡಳಿಯೊಂದನ್ನು ರಚಿಸಿದರು. ಕಳೆದ ಐದು ವರ್ಷಗಳಲ್ಲಿ ತನಗೆ ಬಿಡುಗಡೆ ಮಾಡಿದ್ದ ಹಣದಲ್ಲಿ ಶೇಕಡಾ 74ರಷ್ಟನ್ನು ಮಂಡಳಿಯು ವೆಚ್ಚ ಮಾಡಿ ಶೇಕಡಾ 70ರಷ್ಟರವರೆಗೆ ಭೌತಿಕ ಪ್ರಗತಿಯನ್ನು ಸಾಧಿಸಿತ್ತು. ಸಂವಿಧಾನದ 371–ಜೆ ವಿಧಿ ಮತ್ತು ಮಂಡಳಿಯ ಆದೇಶ 213ರಡಿಯಲ್ಲಿ ಮಂಡಳಿಗೆ ನೀಡಿದ ಹೊಣೆಗಾರಿಕೆಗಳ ಪ್ರಕಾರ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಉನ್ನತೀಕರಿಸುವಲ್ಲಿ ಮಂಡಳಿಯ ಕಾರ್ಯಕ್ಷಮತೆಯ ಪರಿಣಾಮಕಾರಿತ್ವವನ್ನು ನಿರ್ಣಯಿಸಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಯಿತು.

## ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಅಂಶಗಳು

ಸೂಕ್ತ ಸೂಚಕಗಳನ್ನು ಉಲ್ಲೇಖಿಸಿ ವಿವಿಧ ವಲಯಗಳಲ್ಲಿನ ಅಭಿವೃದ್ಧಿಯ ಸಾಪೇಕ್ಷ ಮಟ್ಟವನ್ನು ಖಚಿತಪಡಿಸಿಕೊಳ್ಳುವ ಅಗತ್ಯತೆಯಿದ್ದರೂ ಸಹ ಮಂಡಳಿಯು ವಿಶ್ಲೇಷಣೆಗೆ ಅಗತ್ಯವಾದ ದತ್ತಾಂಶವನ್ನು ಸಂಗ್ರಹಿಸಿರಲಿಲ್ಲ. ಮಂಡಳಿಯಲ್ಲಿ ಯಾವುದೇ ಮಾಹಿತಿಯ ಅನುಪಸ್ಥಿತಿಯಲ್ಲಿ, ಪ್ರದೇಶದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ನೀತಿ ನಿರೂಪಣೆಗೆ ಯಾವುದೇ ಕೊಡುಗೆ ನೀಡಲು ಮಂಡಳಿಗೆ ಸಾಧ್ಯವಾಗಲಿಲ್ಲ. ತತ್ಪರಿಣಾಮವಾಗಿ ಕಲ್ಯಾಣ ಕರ್ನಾಟಕ ಪ್ರದೇಶದ ತಲಾ ಆದಾಯ, ಆರೋಗ್ಯ ಮತ್ತು ಪೌಷ್ಠಿಕಾಂಶದ ಸ್ಥಿತಿ, ಶೈಕ್ಷಣಿಕ ಕಾರ್ಯಕ್ಷಮತೆ, ಇವುಗಳು ಕಡಿಮೆ ಮಟ್ಟದಲ್ಲಿರುವುದು ಮುಂದುವರೆದಿದ್ದು, ಈ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ತೀವ್ರಗೊಳಿಸುವ ಅಗತ್ಯತೆಯನ್ನು ಸೂಚಿಸುತ್ತಿತ್ತು.

ಪ್ರಾದೇಶಿಕ ಅಸಮಾನತೆಗಳನ್ನು ಪರಿಹರಿಸಲು ಮತ್ತು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ಮಂಡಳಿಯು ತನ್ನ ಪ್ರಮುಖ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲಿಲ್ಲ. ಬ್ಯಾಕ್‌ಲಾಗ್‌ಗಳನ್ನು ನಿರ್ಧರಿಸಿ ಅವುಗಳನ್ನು ತೆಗೆದುಹಾಕಲು ಆಯವ್ಯಯ ಹಂಚಿಕೆಗಳನ್ನು ಸೂಚಿಸುವುದು, ಹುದ್ದೆಗಳ ರಚನೆಯಲ್ಲಿ ಶಿಫಾರಸುಗಳನ್ನು ನೀಡುವುದು, ಪ್ರದೇಶದಲ್ಲಿ ಸಂಸ್ಥೆಗಳ ಸ್ಥಾಪನೆಗೆ ಶಿಫಾರಸುಗಳನ್ನು ನೀಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸದಿದ್ದುದು 98ನೇ ಸಾಂವಿಧಾನಿಕ ತಿದ್ದುಪಡಿಯ ಉದ್ದೇಶಗಳನ್ನು ಸಾಕಾರಗೊಳಿಸದಿರುವಲ್ಲಿ ಪರಿಣಮಿಸಿತು. 2016–21ರ ಹಲವಾರು ಅವಧಿಗಳಲ್ಲಿ ನಾಮನಿರ್ದೇಶಿತ ಮಂಡಳಿಯ ಅನುಪಸ್ಥಿತಿಯು ಮಂಡಳಿಯ ವಿವಿಧ ಕಾರ್ಯಗಳ ಮೇಲೆ ಪರಿಣಾಮ ಬೀರಿತ್ತು.

ಸಂವಿಧಾನದ 371–ಜೆ ವಿಧಿಯ ಧ್ಯೇಯೋದ್ದೇಶಗಳನ್ನು ಸಾಧಿಸಲು ಮಂಡಳಿಯ ಕೇಂದ್ರ ಕಾರ್ಯಗಳಾಗಿದ್ದ ನೀತಿ ಒಳಹರಿವುಗಳನ್ನು ಒದಗಿಸುವುದು, ಸೂಕ್ತ ಸೂಚಕಗಳನ್ನು ಬಳಸಿಕೊಂಡು ಅಭಿವೃದ್ಧಿಗಳ ಸಂಬಂಧಿತ ಮಟ್ಟವನ್ನು ನಿರ್ಣಯಿಸುವುದು, ಬೆಳವಣಿಗೆಯಲ್ಲಿನ ಬ್ಯಾಕ್‌ಲಾಗ್‌ಗಳ ಲೆಕ್ಕಾಚಾರ, ಅಭಿವೃದ್ಧಿ ವೆಚ್ಚದ ಮಟ್ಟಗಳ ಕುರಿತು ಸಲಹೆಗಳು, ಪ್ರದೇಶದಲ್ಲಿ ಹುದ್ದೆಗಳು ಮತ್ತು ಸಂಸ್ಥೆಗಳ ರಚನೆಯ ಕುರಿತು ಸಲಹೆ ನೀಡುವುದು ಮುಂತಾದವುಗಳಲ್ಲಿ ಮಂಡಳಿಯು ನಿರೀಕ್ಷಿಸಿದ್ದ ಕ್ರಮವನ್ನು ಸರ್ಕಾರವು ನಿರ್ವಹಿಸಲಿಲ್ಲ.

ಸಂವಿಧಾನದ 371–ಜೆ ವಿಧಿಯಡಿಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಅಧಿಕಾರವನ್ನು ಹೊಂದಿರುವ ಮಂಡಳಿಯು ಪ್ರಾದೇಶಿಕ ಅಸಮತೋಲನಗಳ ಪರಿಹಾರಕ್ಕಾಗಿ ದೀರ್ಘಾವಧಿಯ ಯೋಜನೆಯನ್ನು ರೂಪಿಸುವ ಮೂಲಕ ಯಾವುದೇ ಕಾರ್ಯತಂತ್ರ ಯೋಜನೆಯನ್ನು ರೂಪಿಸಿರಲಿಲ್ಲ. ರಾಜ್ಯ ಆಯವ್ಯಯದಲ್ಲಿ ಹಣ ಹಂಚಿಕೆಯು ಘೋಷಣೆಯಾದ ನಂತರವೇ ಯೋಜನಾ ಪ್ರಕ್ರಿಯೆಯನ್ನು ಆರಂಭ ಮಾಡುತ್ತಿದ್ದರಿಂದ ವಾರ್ಷಿಕ ಕಾರ್ಯ ಯೋಜನೆಗಳನ್ನು ತಯಾರಿಸುವುದು ಪ್ರತಿ ವರ್ಷವೂ ವಿಳಂಬವಾಗುತ್ತಿತ್ತು. ಮಂಡಳಿಯು ತಯಾರಿಸಿದ ಯೋಜನೆಗಳು ವಿವಿಧ ಸಾಮಾಜಿಕ–ಆರ್ಥಿಕ ಸೂಚಕಗಳು, ಪೂರ್ಣಗೊಳಿಸಲು ಸಮಯಾವಧಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಾಧಿಸಬೇಕಾದ ಯಾವುದೇ ಗುರಿಗಳನ್ನು ನಿರ್ದಿಷ್ಟಪಡಿಸಿರಲಿಲ್ಲ. ಯೋಜನೆಗಳನ್ನು ಅಂತಿಮಗೊಳಿಸಿದ ನಂತರ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ರದ್ದುಗೊಳಿಸಿರುವುದು ಅಥವಾ ಬದಲಾಯಿಸಿರುವುದು ಯೋಜನೆಗಳನ್ನು ಪ್ರಸ್ತಾವಿಸುವ ಮೊದಲಿನ ಪೂರ್ವಸಿದ್ಧತಾ ಚಟುವಟಿಕೆಗಳು ಅಸಮರ್ಪಕವಾಗಿದ್ದವು ಎಂಬುದನ್ನು ಸೂಚಿಸುತ್ತಿತ್ತು.

ಮಂಡಳಿಯ ಆದೇಶ 2013ರಲ್ಲಿ ನಿರ್ದಿಷ್ಟಪಡಿಸಿದ್ದ ಅನುಷ್ಠಾನ ಸಮಿತಿಯನ್ನು ರಚಿಸದಿದ್ದುದು ಮಂಡಳಿಯು ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಪರಿಣಾಮಕಾರಿ ಅನುಷ್ಠಾನದ ಮೇಲೆ ಪರಿಣಾಮ ಬೀರಿತ್ತು. ಶಿಕ್ಷಣ, ಕೃಷಿ, ಆರೋಗ್ಯ, ಕೌಶಲ್ಯ ಅಭಿವೃದ್ಧಿ ಮುಂತಾದ ಕ್ಷೇತ್ರಗಳ ಮೇಲೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡದೆ ಮಂಡಳಿಯು ಪ್ರದೇಶದಲ್ಲಿ ರಸ್ತೆ ಸಂಪರ್ಕವನ್ನು ಒದಗಿಸುವುದಕ್ಕೆ ಮಾತ್ರ ಹೆಚ್ಚು ಪ್ರಾಮುಖ್ಯತೆ ನೀಡಿತ್ತು. ಭೂಸ್ವಾಧೀನ, ಮಣ್ಣು ಪರೀಕ್ಷೆ ಮುಂತಾದ ಪೂರ್ವಸಿದ್ಧತಾ ಕಾರ್ಯಗಳನ್ನು ನಡೆಸದೇ ಕಾಮಗಾರಿಗಳನ್ನು ಪ್ರಸ್ತಾವಿಸಿದ್ದು ಕಾಮಗಾರಿಗಳ ರದ್ದತಿ, ಕಾಮಗಾರಿಗಳ ಬದಲಾವಣೆ ಮತ್ತು ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿ ವಿಳಂಬವಾಗುವಲ್ಲಿ ಪರಿಣಮಿಸಿತು. ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯು ನಿಗದಿತ ಸಮಯಕ್ಕೆ ಸೀಮಿತವಾಗಿರಲಿಲ್ಲ ಮತ್ತು ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ನಿಗದಿತ ಸಮಯವನ್ನು ಮೀರಿದ್ದವು. ಕಾಮಗಾರಿಗಳನ್ನು ಶೂನ್ಯ ಅಥವಾ ಭಾಗಶಃ ವೆಚ್ಚದೊಂದಿಗೆ ಪೂರ್ಣಗೊಳಿಸಲಾಗಿದೆ ಎಂದು ಘೋಷಿಸಿರುವುದು ಕಾಮಗಾರಿಗಳ ಪೂರ್ಣಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳದೆ ಪೂರ್ಣಗೊಳಿಸಲಾಗಿದೆ ಎಂಬ ತಪ್ಪಾದ ವರದಿ ನೀಡಿರುವುದನ್ನು ಸೂಚಿಸುತ್ತದೆ.

ಮಂಡಳಿಯು ಪ್ರತಿ ವರ್ಷ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜುಗಳನ್ನು ತಯಾರಿಸದ ಕಾರಣ ಮಂಡಳಿಯ ಮಟ್ಟದಲ್ಲಿ ಆಯವ್ಯಯ ನಿಂಯಂತ್ರಣದ ಕೊರತೆಯಿದ್ದಿತು. ಲಭ್ಯವಿರುವ ನಿಧಿಯ ಬಳಕೆಯ ಸ್ಥಿತಿ, ಬಳಕೆ ಪ್ರಮಾಣಪತ್ರಗಳನ್ನು ಗಮನಿಸುವುದು, ಅನುಷ್ಠಾನ ಏಜೆನ್ಸಿಗಳಿಗೆ ನೀಡಲಾದ ಮುಂಗಡಗಳ ಮೇಲ್ವಿಚಾರಣೆ ಇತ್ಯಾದಿಗಳಲ್ಲಿ ಸುಧಾರಣೆಯ ಅಗತ್ಯವಿದೆ.

ಮಂಡಳಿಯು ತನ್ನ ಕಾರ್ಯಗಳನ್ನು ನಿರ್ವಹಿಸಲು ನಿಯತಕಾಲಿಕ ಸಭೆಗಳನ್ನು ನಡೆಸದ ಕಾರಣ ಉನ್ನತ ಮಟ್ಟದಲ್ಲಿ ಮೇಲ್ವಿಚಾರಣೆಯು ಅಸಮರ್ಪಕವಾಗಿತ್ತು. ಅನುಷ್ಠಾನ ಸಂಸ್ಥೆಗಳು ಕಾರ್ಯಗತಗೊಳಿಸುವ ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಮಂಡಳಿಯು ಇನ್ನೂ ಸದೃಢವಾದ ಗುಣಮಟ್ಟ ಭರವಸೆ ಕಾರ್ಯವಿಧಾನವನ್ನು ರಚಿಸಬೇಕಿದೆ. ಮಂಡಳಿಯು ತನ್ನ ಕಾಮಗಾರಿಗಳ ಪ್ರಭಾವದ ಯಾವುದೇ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಗಳ ಮೂಲಕ ತನ್ನ ಕಾರ್ಯಗಳ ಮೇಲ್ವಿಚಾರಣೆಯಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ಸುಲಭಗೊಳಿಸುವ ಚೌಕಟ್ಟನ್ನು ಸ್ಥಾಪಿಸಿರಲಿಲ್ಲ.

## ಸಿಎಜಿ ರವರು ಏನು ಶಿಫಾರಸು ಮಾಡುತ್ತಾರೆ

1. **ಮಂಡಳಿಯು ಪ್ರದೇಶದ ಹಿಂದುಳಿದಿರುವಿಕೆಯ ಸ್ವತಂತ್ರ ಮೌಲ್ಯಮಾಪನವನ್ನು ಕೈಗೊಳ್ಳಬೇಕು, ಅಸಮತೋಲನಗಳು ಮತ್ತು ಅದರ ಕಾರಣಗಳನ್ನು ಗುರುತಿಸಲು ತುಲನಾತ್ಮಕ ವಿಶ್ಲೇಷಣೆಯನ್ನು ಕೈಗೊಳ್ಳಬೇಕು ಮತ್ತು ಸೂಕ್ತವಾದ ಸಂಯೋಜಿತ ಸೂಚಕ ಚೌಕಟ್ಟನ್ನು ಅಳವಡಿಸಿಕೊಳ್ಳುವ ಮೂಲಕ**

ಅಗತ್ಯವಿರುವ ಪರಿಹಾರ ಕ್ರಮಗಳು ಮತ್ತು ಕಾರ್ಯತಂತ್ರಗಳನ್ನು ಪ್ರಸ್ತಾವಿಸಬೇಕು ಹಾಗೂ ಪ್ರದೇಶದ ಉನ್ನತಿಯಲ್ಲಿನ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಅವುಗಳನ್ನು ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳಾಗಿ ಸಂಯೋಜಿಸಬೇಕು.

2. ಮಂಡಳಿಯು 2013ರ ಮಂಡಳಿಯ ಆದೇಶದ ಷರತ್ತು 12ರಡಿಯಲ್ಲಿ ಪ್ರದೇಶಕ್ಕೆ ಅಗತ್ಯವಿರುವ ಅಭಿವೃದ್ಧಿ ವೆಚ್ಚದ ಮಟ್ಟವನ್ನು ಸೂಚಿಸಲು, ಕೈಗಾರಿಕಾ ಅಭಿವೃದ್ಧಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ನೀತಿ ಒಳಹರಿವುಗಳನ್ನು ಒದಗಿಸಲು ಮತ್ತು ಸಂಸ್ಥೆಗಳ ಮಂಜೂರಾತಿಗೆ ಸಲಹೆ ನೀಡುವ ಮೂಲಕ ವಿವಿಧ ವಲಯಗಳಲ್ಲಿನ ಅಭಿವೃದ್ಧಿಯ ಸಂಬಂಧಿತ ಮಟ್ಟವನ್ನು ಖಚಿತಪಡಿಸಿಕೊಳ್ಳಲು ತನ್ನ ಕಾರ್ಯಗಳನ್ನು ನಿರ್ವಹಿಸಬೇಕು.

3. ವಿವಿಧ ಏಜೆನ್ಸಿಗಳಿಗೆ ವಹಿಸಲಾಗಿರುವ ತನ್ನ ಕಾರ್ಯಯೋಜನಾ ಕಾಮಗಾರಿಗಳ ಅನುಷ್ಠಾನದ ಮೇಲೆ ಮಂಡಳಿಯು ಪರಿಣಾಮಕಾರಿ ಮೇಲ್ವಿಚಾರಣೆಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಮಂಡಳಿಯ ಹಣದಿಂದ ರಚಿಸಲಾದ ಸ್ವತ್ತುಗಳ ಅಂತಿಮ ಬಳಕೆಯನ್ನು ಖಚಿತಪಡಿಸಿಕೊಳ್ಳಬೇಕು.

4. ಮಂಡಳಿಯ ಕಾರ್ಯಯೋಜನೆಯೊಂದಿಗೆ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ವಿವಿಧ ಇಲಾಖೆಗಳು/ಸಂಸ್ಥೆಗಳು ಅನುಷ್ಠಾನಗೊಳಿಸಿರುವ ಕಾಮಗಾರಿಗಳು/ಕಾರ್ಯಕ್ರಮಗಳ ವಿಲೀನವನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬಹುದು.

5 ಯೋಜಿತ ಕಾಮಗಾರಿಗಳ ಅನುಷ್ಠಾನದಲ್ಲಿ ವಿಪರೀತ ವಿಳಂಬವಾಗುವ ಸಂದರ್ಭಗಳನ್ನು ತಪ್ಪಿಸಲು ಮಂಡಳಿಯು ನಿಗದಿತ ಕಾಲಾವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು.

6 ಮಂಡಳಿಯ ಕಾರ್ಯ ಯೋಜನೆಯೊಂದಿಗೆ ಪ್ರದೇಶದಲ್ಲಿ ವಿವಿಧ ಇಲಾಖೆಗಳು/ಸಂಸ್ಥೆಗಳು ಅನುಷ್ಠಾನಗೊಳಿಸಿರುವ ಕಾಮಗಾರಿಗಳು/ಕಾರ್ಯಕ್ರಮಗಳ ವಿಲೀನವನ್ನು ರಾಜ್ಯ ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು.

7 ಮಂಡಳಿಯು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ನಿಧಿಯ ಬಿಡುಗಡೆಯನ್ನು ನಿಯಂತ್ರಿಸಬೇಕು ಮತ್ತು ಮಂಡಳಿಯಿಂದ ಬಿಡುಗಡೆಯಾದ ನಿಧಿಯ ಮೇಲೆ ಸಂಗ್ರಹವಾದ ಬಡ್ಡಿಯ ಮರುಪಾವತಿಗೆ ಒತ್ತಾಯಿಸಬೇಕು.

8. ಮಂಡಳಿಯ ಲೆಕ್ಕಪತ್ರಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಮತ್ತು ಲೆಕ್ಕಪರಿಶೋಧನೆ ಮೂಲಕ ಪ್ರಮಾಣೀಕರಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

9. ಕಾಮಗಾರಿಗಳ ಗುಣಮಟ್ಟವನ್ನು ಸ್ಪಷ್ಟ ಮತ್ತು ದೃಢವಾದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಮಂಡಳಿಯು ಖಚಿತಪಡಿಸಿಕೊಳ್ಳಬೇಕು.

10. ಮಂಡಳಿಯು ಕಾಮಗಾರಿಗಳ ಅನುಷ್ಠಾನದ ಎಲ್ಲಾ ಹಂತಗಳಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಗುಣಮಟ್ಟ ಭರವಸೆ ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಗಳನ್ನು ಸಿದ್ಧಪಡಿಸಬೇಕು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯ ಚೌಕಟ್ಟನ್ನು ಸ್ಥಾಪಿಸಬೇಕು.

11. ಸಭೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಮಂಡಳಿಯ ಆದೇಶ 2013ರ ಷರತ್ತು 10ರ ನಿಬಂಧನೆಗಳ ಅನುಸರಣೆಯನ್ನು ಮಂಡಳಿಯು ಖಚಿತಪಡಿಸಿಕೊಳ್ಳಬೇಕು.